ತಾಲ್ಲೂಕು	
1. ರಾಯಚೂರು	17
2. ಮಾನ್ವಿ	09
3. ಸಿಂಧನೂರು	07
4. ಗಂಗಾವತಿ	09
5. ಕೊಪ್ಪಳ್	12
6. ಯಲಬುರ್ಗಾ	13
7. ಕುಷ್ಟಗಿ	10
8. ಲಿಂಗಸೂಗೂರು	11
9. ದೇವದುರ್ಗ	06
	94

ಇ) 1993–94ನೇ ಸಾಲಿನಲ್ಲಿ ಸರ್ಕಾರಿ ಹಾಗೂ ಖಾಸಗೀ ಪ್ರೌಢಶಾಲೆಗಳ ಅವಶ್ಯಕತೆಯನ್ನು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಈ) 1932 ಸಿಂಧನೂರು ತಾಲ್ಲೂಕಿನಲ್ಲಿ 8 ಸರ್ಕಾರಿ ಪ್ರೌಢಶಾಲೆಗಳಿದ್ದು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಪ್ರೌಢಶಾಲೆಗಳು ಇರುತ್ತವೆ.

ಬೆಂಗಳೂರು ಜಿಲ್ಲೆಯಲ್ಲಿರುವ ಪ್ರೌಢಶಾಲೆಗಳ ಸಂಖ್ಯೆ

300 (166) ಶ್ರೀ ಕೆ. ಲಕ್ಷ್ಮಣ್ (ರಾಜಾಜಿ ನಗರ):-

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಜಿಲ್ಲೆಯಲ್ಲಿರುವ ಪ್ರೌಢಶಾಲೆಗಳ ಸಂಖ್ಯೆ ಎಷ್ಟು; ಹಾಗೂ ಉಪಾಧ್ಯಾಯರ ಸಂಖ್ಯೆ ಎಷ್ಟು (ಪ್ರತಿ ಶಾಲೆಗಳ ಪ್ರತ್ಯೇಕ ವರದಿ ನೀಡುವುದು);

ಆ) ಮೇಲ್ಕಂಡ ಶಾಲೆಗಳಲ್ಲಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು; (ಪ್ರತಿ ಶಾಲೆಗಳ ಪ್ರತ್ಯೇಕ ವರದಿ ನೀಡುವುದು);

ಇ) ಪ್ರತಿ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಉಪಾಧ್ಯಾಯರುಗಳು ಇರುವರೇ ಅಥವಾ ಹೆಚ್ಚಿನ ಉಪಾಧ್ಯಾಯರು ಇರುವರೇ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–

ಅ)	ಶಾಲೆಗಳ ಸಂಖ್ಯೆ		ಉಪಾಧ್ಯಾಯರ ಸಂಖ್ಯೆ
1. ಬೆಂಗಳೂರು ನಗರ	1. ಸರ್ಕಾರಿ	37	538
(ದಕ್ಷಿಣ)	2. ಖಾಸಗಿ	118	1274
2. ಬೆಂಗಳೂರು ನಗರ	1. ಸರ್ಕಾರಿ	22	237
(ಉತ್ತರ)	2. ಖಾಸಗಿ	111	1284

3. ಬೆಂಗಳೂರು	1. ಸರ್ಕಾರಿ	69	526
ಗ್ರಾಮಾಂತರ	2. ಖಾಸಗಿ	76	753

(ಪ್ರತಿ ಶಾಲೆಗಳ ಪ್ರತ್ಯೇಕ ವರದಿ ನಂತರ ನೀಡಲಾಗುವುದು)

ಆ)	ಹುಡುಗರು	ಹುಡುಗಿಯರು	ಒಟ್ಟು
1. ಬೆಂಗಳೂರು ನಗರ ದಕ್ಷಿಣ			
1. ಸರ್ಕಾರಿ ಪ್ರೌಢಶಾಲೆ	7002	7212	14214
2. ಖಾಸಗಿ	27980	26340	54320
2. ಬೆಂಗಳೂರು ನಗರ (ಉತ್ತರ)			
1. ಸರ್ಕಾರಿ	3765	2655	6420
2. ಖಾಸಗಿ	37304	8419	45723
3. ಬೆಂಗಳೂರು ಗ್ರಾಮಾಂತರ			
1. ಸರ್ಕಾರಿ	12438	8231	20669
2. ಖಾಸಗಿ	15049	9837	24856

(ಪ್ರತಿ ಶಾಲೆಗಳ ಪ್ರತ್ಯೇಕ ವರದಿ ನಂತರ ನೀಡಲಾಗುವುದು)

ಇ) 1. ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತಕ್ಕೆ ಅನುಗುಣವಾಗಿ ಶಿಕ್ಷಕರು ಇರುವರು.

2. ಖಾಸಗಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಶಿಕ್ಷಕರು ಇರುತ್ತಾರೆ.

ರಾಜ್ಯದ ಎಲ್ಲಾ ನಗರಗಳಲ್ಲಿ ಬಲ್ಕ್ ವೆಂಡಿಂಗ್ ಬೂತುಗಳ ಪ್ರಾರಂಭ

301 (202) ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಜಿರಾದ್):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಲ್ಲಾ ಜಿಲ್ಲಾ ಹಾಲು ಒಕ್ಕೂಟಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಾಲು ಸರಬರಾಜು ಪ್ರಮಾಣದ ಹಾಲು ದೊರೆಯಲು ಅನುಕೂಲವಾಗುವಂತೆ ಬೆಂಗಳೂರು ನಗರದಲ್ಲಿರುವಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಸಹ ಬಲ್ಕ್ ವೆಂಡಿಂಗ್ ಬೂತುಗಳನ್ನು ಪ್ರಾರಂಭಿಸುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆಯೇ;

ಆ) ಆ ರೀತಿ ಹಾಲಿನ ಬೂತ್‌ಗಳನ್ನು ಪ್ರಾರಂಭಿಸುವುದರಿಂದ ಸ್ಥಳೀಯ ನಾಗರೀಕರಿಗೆ ಒಳ್ಳೆಯ ಗುಣಮಟ್ಟದ ಹಾಲು ಹಾಗೂ ನಿರುದ್ಯೋಗಿ ಯುವಕರಿಗೆ ಕನ್ಸೇಶನ್‌ಶಿಪ್ ದೊರೆಯುವುದರಿಂದ, ಸರ್ಕಾರ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):-